**All India Radio: Bangalore**
**National Bulletin In Kannada**
**17.11.2025  19.35 p.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**17.11.2025  19.35 p.m.**

**<><><><>**

**ಮುಖ್ಯಾಂಶಗಳು**

**೧. ಭವಿಷ್ಯದ ಯಾವುದೇ ಪರಿಸ್ಥಿತಿ ಎದುರಿಸಲು ಭಾರತ ಸನ್ನದ್ಧ- ಸೇನಾಪಡೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ**

**೨. ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಉತ್ತರ ವಲಯ ಮಂಡಳಿ ಸಭೆ; ನೀರು ಹಂಚಿಕೆ - ಅಭಿವೃದ್ಧಿ ಕಾಮಗಾರಿ ಸಮನ್ವಯ ಚರ್ಚೆ**

**೩. ಬಿಹಾರ ವಿಧಾನಸಭೆ; ನಾಳೆ ಎನ್‌ಡಿಎ ಶಾಸಕಾಂಗ ಪಕ್ಷದ ಸಭೆ- ನಾಯಕನ ಆಯ್ಕೆ ಸಂಭವ**

**೪. ಡೆಫಿಲಿಂಪಿಕ್ಸ್; ೧೦ ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಅನೂಯಾ ಪ್ರಸಾದ್‌ಗೆ ದಾಖಲೆಯ ಅಂಕ; ಚಿನ್ನದ ಪದಕ**

**<><><><>**

ಭಾರತ ಭವಿಷ್ಯದ ಯಾವುದೇ ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿದೆ ಎಂದು ಸೇನಾಪಡೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿದ್ದಾರೆ. ಅವರು ನವದೆಹಲಿಯಲ್ಲಿಂದು 'ಚಾಣಕ್ಯ ರಕ್ಷಣಾ ಮಾತುಕತೆ-೨೦೨೫ರ' ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತ, ೮೮ ತಾಸುಗಳ ಕಾಲ ನಡೆದ 'ಆಪರೇಷನ್ ಸಿಂದೂರ್' ಕೇವಲ ಮಾದರಿ ತುಣುಕು-ಟ್ರೇಲರ್ ಆಗಿದೆ ಎಂದರು. ಪಾಕಿಸ್ತಾನ ಯಾವುದೇ ಕುಕೃತ್ಯ ಎಸಗಿದರೆ, ನೆರೆಯ ಭಾರತದೊಂದಿಗೆ ಜವಾಬ್ದಾರಿಯುತವಾಗಿ ಹೇಗೆ ವರ್ತಿಸಬೇಕು ಎಂಬುದನ್ನು, ಭಾರತದ ಸಶಸ್ತ್ರ ಪಡೆ ಕಲಿಸಿಕೊಡಲಿದೆ ಎಂದು ಜನರಲ್ ದ್ವಿವೇದಿ ತಿಳಿಸಿದರು. ಪ್ರಗತಿ ಮತ್ತು ಅಭಿವೃದ್ಧಿಯ ಬಗ್ಗೆಯೇ ಸದಾ ಮಾತನಾಡುವ ಭಾರತಕ್ಕೆ ಸರ್ಕಾರಿ ಪ್ರಾಯೋಜಿತ ಉಗ್ರವಾದ ಕಳವಳದ ವಿಷಯವಾಗಿದೆ. ನೀರು ಮತ್ತು ರಕ್ತ ಒಟ್ಟಿಗೆ ಹರಿಯುದಿಲ್ಲ ಹಾಗೂ ಮಾತುಕತೆ ಮತ್ತು ಉಗ್ರವಾದ ಒಟ್ಟಿಗೆ ನಡೆಯುವುದಿಲ್ಲ ಎನ್ನುವುದು ಭಾರತದ ಹೊಸ ನಿಯಮವಾಗಿದೆ. ಉಗ್ರವಾದವನ್ನು ಪ್ರಾಯೋಜಿಸುವವರಿಗೆ ಹಾಗೂ ಉತ್ತೇಜಿಸುವವರಿಗೆ ಭಾರತ ತಕ್ಕ ಉತ್ತರ ನೀಡಲಿದೆ ಎಂದು ಸೇನಾ ಪಡೆ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಸ್ಪಷ್ಟಪಡಿಸಿದರು.

**ಧ್ವನಿ: ಜನರಲ್ ದ್ವಿವೇದಿ ( ೧೬ ಸೆಕೆಂಡ್ಸ್)**

ಜಮ್ಮು-ಕಾಶ್ಮೀರದಲ್ಲಿ ಉಗ್ರವಾದ ಚಟುವಟಿಕೆ ಗಣನೀಯವಾಗಿ ಕಡಿಮೆಯಾಗಿದೆ. ಈ ವರ್ಷ ೩೧ ಭಯೋತ್ಪಾದಕರನ್ನು ದಮನಗೊಳಿಸಲಾಗಿದೆ. ಇವರಲ್ಲಿ ಶೇಕಡ ೬೧ ರಷ್ಟು ಪಾಕಿಸ್ತಾನಿ ಭಯೋತ್ಪಾದಕರು ಸೇರಿದ್ದಾರೆ ಎಂದು ತಿಳಿಸಿದರು. ಇದೇ ತಿಂಗಳು ೨೭ ಮತ್ತು ೨೮ ರಂದು ನವದೆಹಲಿಯಲ್ಲಿ ಚಾಣಕ್ಯ ರಕ್ಷಣಾ ಮಾತುಕತೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ ಎಂದು ಸೇನಾ ಪಡೆ ಮುಖ್ಯಸ್ಥರು ಹೇಳಿದರು.

**<><><><>**

ಕೇಂದ್ರ ಗೃಹ ಸಚಿವ ಅಮಿತ್ ಶಾ, ಹರಿಯಾಣದ ಫರಿದಾಬಾದ್‌ನಲ್ಲಿಂದು ಉತ್ತರ ವಲಯ ಮಂಡಳಿ ಸಭೆ ನಡೆಸಿದರು. ರಾಜಸ್ಥಾನ ಮುಖ್ಯಮಂತ್ರಿ ಭಜನ್‌ಲಾಲ್ ಶರ್ಮಾ, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖವಿಂದರ್ ಸಿಂಗ್ ಸುಖು, ಜಮ್ಮು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸೆಕ್ಸೆನಾ, ಜಮ್ಮು-ಕಾಶ್ಮೀರ ಮುಖ್ಯಮಂತ್ರಿ ಉಮರ್ ಅಬ್ದುಲ್ಲಾ, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತ ಸಭೆಯಲ್ಲಿ ಪಾಲ್ಗೊಂಡಿದ್ದರು. ಸಭೆಯಲ್ಲಿ ನೀರು ಹಂಚಿಕೆ ವಿಷಯ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಸಮನ್ವಯತೆ ಕುರಿತಂತೆ ಚರ್ಚಿಸಲಾಯಿತು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಿರ್ದೇಶನ ಹಾಗೂ ದೂರದೃಷ್ಟಿ ಹಿನ್ನೆಲೆಯಲ್ಲಿ ಟೀಮ್ ಭಾರತ್ ಮತ್ತು ವಲಯ ಮಂಡಳಿಗಳ ಗಮನಾರ್ಹ ಕೊಡುಗೆಗಾಗಿ ಇಂತಹ ಸಭೆಗಳನ್ನು ನಡೆಸಲಾಗುತ್ತಿದೆ. ಸಭೆಗೂ

ಮುನ್ನ ದೆಹಲಿ ಕೆಂಪು ಕೋಟೆಯ ಬಳಿ ಸಂಭವಿಸಿದ ಸ್ಫೋಟದ ಘಟನೆಯಲ್ಲಿ ಮೃತಪಟ್ಟವರ ಸ್ಮರಣಾರ್ಥ ಗೌರವ ನಮನ ಸಲ್ಲಿಸಲಾಯಿತು.

<><><><>

೧೬ನೇ ಹಣಕಾಸು ಆಯೋಗದ ಅಧ್ಯಕ್ಷ ಡಾ.ಅರವಿಂದ್ ಪನಗಾರಿಯಾ ಹಾಗೂ ಸದಸ್ಯರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಇಂದು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ೨೦೨೬-೨೦೩೧ ರ ಅವಧಿಗಾಗಿ ವರದಿಯನ್ನು ರಾಷ್ಟ್ರಪತಿಯವರಿಗೆ ಸಲ್ಲಿಸಲಾಯಿತು ಎಂದು ಡಾ.ಅರವಿಂದ್ ಪನಗಾರಿಯಾ ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

<><><><>

ಸೌದಿ ಅರೇಬಿಯಾದ ಮದೀನದಲ್ಲಿ ನಿನ್ನೆ ರಾತ್ರಿ ಸಂಭವಿಸಿದ ಬಸ್ ಅಪಘಾತದಲ್ಲಿ ಮೃತಪಟ್ಟ ಉಮ್ರಾ ಯಾತ್ರಾರ್ಥಿಗಳ ಸಂತ್ರಸ್ತರ ಕುಟುಂಬಗಳ ನೆರವಿಗಾಗಿ ಜೆದ್ದಾದಲ್ಲಿರುವ ಭಾರತದ ಕಾನ್ಸುಲೇಟ್ ಜನರಲ್ ಕಚೇರಿಯಲ್ಲಿ ದಿನವಿಡಿ ಕಾರ್ಯ ನಿರ್ವಹಿಸುವ ನಿಯಂತ್ರಣಾ ಕೊಠಡಿ ತೆರೆಯಲಾಗಿದೆ. ಈ ಘಟನೆ ಬಗ್ಗೆ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರ ಖಾತೆ ಸಚಿವ ಕಿರಣ್ ರಿಜಿಜು ಶೋಕ ವ್ಯಕ್ತಪಡಿಸಿದ್ದಾರೆ. ರಾಜತಾಂತ್ರಿಕ ಕಚೇರಿಯೊಂದಿಗೆ ಭಾರತ, ಸತತ ಸಂಪರ್ಕದಲ್ಲಿದ್ದು, ಸಂತ್ರಸ್ತ ಕುಟುಂಬಗಳಿಗೆ ಎಲ್ಲಾ ನೆರವು ಒದಗಿಸಲಾಗುವುದು ಎಂದು ತಿಳಿಸಿದ್ದಾರೆ.

<><><><>

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅಧ್ಯಕ್ಷತೆಯಲ್ಲಿಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಇದೇ ೧೯ ರಂದು ಸಂಪುಟ ವಿಸರ್ಜನೆ ಮಾಡುವಂತೆ ಶಿಫಾರಸ್ಸು ಮಾಡಲು ತೀರ್ಮಾನಿಸಲಾಗಿದ್ದು, ಈ ಕುರಿತ ಪತ್ರವನ್ನು ರಾಜ್ಯಪಾಲ ಅರೀಫ್ ಮಹಮ್ಮದ್ ಖಾನ್ ಅವರಿಗೆ ಸಲ್ಲಿಸಲಾಗಿದೆ. ನೂತನ ಸರ್ಕಾರದ ಪ್ರಮಾಣವಚನ ಇದೆ ೨೦ ರಂದು ನಡೆಯಲಿದ್ದು, ಪಾಟ್ನಾದ ಐತಿಹಾಸಿಕ ಗಾಂಧಿ ಮೈದಾನದಲ್ಲಿ ಸಮಾರಂಭಕ್ಕೆ ಸಿದ್ಧತೆ ಆರಂಭವಾಗಿದೆ.  ಜೆಡಿಯು ಶಾಸಕಾಂಗ ಪಕ್ಷದ ಸಭೆ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತೀಶ್ ಕುಮಾರ್ ನೇತೃತ್ವದಲ್ಲಿ ಇಂದು ನಡೆಯಲಿದೆ. ಬಿಜೆಪಿಯ ನೂತನ ೮೯ ಅಭ್ಯರ್ಥಿಗಳ ಸಭೆ ನಾಳೆ ನಡೆಯಲಿದ್ದು, ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಮಾಡಲಾಗುವುದು ಎಂದು ಬಿಹಾರ ಬಿಜೆಪಿ ರಾಜ್ಯಾಧ್ಯಕ್ಷ ಡಾ.ದಿಲೀಪ್ ಜೈಸ್ವಾಲ್ ತಿಳಿಸಿದ್ದಾರೆ. ಈ ಸಭೆಯ ಬಳಿಕ ಎನ್‌ಡಿಎ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಮುಖ್ಯಮಂತ್ರಿ ನಿತೀಶ್‌ಕುಮಾರ್ ಎನ್‌ಡಿಎ  ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗುವ ನಿರೀಕ್ಷೆಯಿದೆ.

<><><><>

ಬಾಂಗ್ಲಾದೇಶದಲ್ಲಿ ಅಂತಾರಾಷ್ಟ್ರೀಯ ಅಪರಾಧ ನ್ಯಾಯ ಮಂಡಳಿ, ಮಾನವೀಯತೆ ವಿರುದ್ಧದ ಅಪರಾಧಕ್ಕಾಗಿ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರನ್ನು ಅಪರಾಧಿ ಎಂದು ಹೇಳಿದೆ. ನ್ಯಾಯ ಮಂಡಳಿ, ಒಂದು ತಿಂಗಳ ಕಾಲ ವಿಚಾರಣೆ ನಡೆಸಿ, ಜೀವಾವಧಿ ಶಿಕ್ಷೆ ಪ್ರಕಟಿಸಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

<><><><>

ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಅಕ್ಷಯ ಪಾತ್ರಾ ಫೌಂಡೇಶನ್, ವಿಶ್ವದ ಅತಿದೊಡ್ಡ ಮಧ್ಯಾಹ್ನದ ಊಟ 'ಪಿಎಂ ಪೋಷಣ್ ಅಭಿಯಾನ' ಕಾರ್ಯಕ್ರಮ ನಿರ್ವಹಿಸುತ್ತಿದೆ. ದೇಶದ ೨೪ ಸಾವಿರ ಶಾಲೆಗಳಿಗೆ ಊಟ ಒದಗಿಸುತ್ತಿದೆ. ಕಳೆದ ೨೫ ವರ್ಷಗಳಿಂದ ಶಾಲಾ ಊಟ ಪೂರೈಕೆಯಲ್ಲಿ ತೊಡಗಿರುವ  ಅಕ್ಷಯ ಪಾತ್ರಾ ಫೌಂಡೇಶನ್, ಪ್ರತಿ ದಿನ ೨೨ ಲಕ್ಷದ ೫೦ ಸಾವಿರ ವಿದ್ಯಾರ್ಥಿಗಳಿಗೆ ಊಟ ಒದಗಿಸುತ್ತಿದೆ. ಪ್ರತಿಷ್ಠಾನದ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಶ್ರೀಧರ್ ವೆಂಕಟ್ ಮಾಹಿತಿ ನೀಡಿದ್ದಾರೆ.

**ಧ್ವನಿ: ಶ್ರೀಧರ್ ವೆಂಕಟ್ (  ೩೦  ಸೆಕೆಂಡ್ಸ್)**

<><><><>

ಕೇಂದ್ರ ಸರ್ಕಾರ ಮುದ್ರಣ ಮಾಧ್ಯಮಗಳ ಜಾಹಿರಾತು ದರಗಳನ್ನು ಶೇಕಡ ೨೬ ರಷ್ಟು ಹೆಚ್ಚಿಸಿದೆ. ಒಂದು ಲಕ್ಷ ಪ್ರತಿಗಳ ಪ್ರಸರಣವಿರುವ ದಿನಪತ್ರಿಕೆಯ ಕಪ್ಪು-ಬಿಳುಪು ಜಾಹಿರಾತಿಗೆ ಪ್ರತಿ ಚದರ ಸೆಂಟಿಮೀಟರ್ ದರವನ್ನು ಈಗಿನ ೪೭ ರೂಪಾಯಿ ೪೦ ಯಿಂದ ೫೯ ರೂಪಾಯಿ ೬೮ ಪೈಸೆಗೆ ಹೆಚ್ಚಿಸಲಾಗಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

<><><><>

ಜಪಾನಿನ ಟೋಕಿಯೋದಲ್ಲಿ ನಡೆದಿರುವ ಡೆಫಿಲಿಂಪಿಕ್ಸ್ ಶೂಟಿಂಗ್ ಸ್ಪರ್ಧೆಯ ಹತ್ತು ಮೀಟರ್ ಏರ್ ಪಿಸ್ತೂಲ್ ಮಹಿಳಾ ವಿಭಾಗದಲ್ಲಿ ಭಾರತದ ಅನೂಯಾ ಪ್ರಸಾದ್ ದಾಖಲೆಯ ೨೪೧ ಪಾಯಿಂಟ್ ೧ ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದಿದ್ದಾರೆ. ಇದೇ ವಿಭಾಗದಲ್ಲಿ ಮತ್ತೊಂಬ ಕ್ರೀಡಾಪಟು ಪ್ರಾಂಜಲಿ ದುಮಾಲ್ ರಜತ ಪಡೆದುಕೊಂಡಿದ್ದಾರೆ. ಪುರುಷರ ೧೦ ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಅಭಿನವ್ ದೇಸ್ವಾಲ್ ಬೆಳ್ಳಿ ಪದಕ ಗೆದ್ದಿದ್ದಾರೆ.

<><><><>

ಈಜಿಪ್ಟ್‌ನ ಖೈರೋದಲ್ಲಿ ನಡೆದಿರುವ ಐಎಸ್‌ಎಸ್‌ಎಫ್ ರೈಫಲ್ ಪಿಸ್ತೂಲ್ ವಿಶ್ವ ಚಾಂಪಿಯನ್‌ಶಿಪ್‌ನ ಪುರುಷರ ೨೫ ಮೀಟರ್ ಸೆಂಟರ್ ಪಿಸ್ತೂಲ್ ವಿಭಾಗದಲ್ಲಿ ಭಾರತದ ಗುರುಪ್ರೀತ್ ಸಿಂಗ್ ರಜತ ಪದಕ ಪಡೆದಿದ್ದಾರೆ. ೩ ಚಿನ್ನ, ೬ ಬೆಳ್ಳಿ ಹಾಗೂ ೪ ಕಂಚಿನ ಪದಕಗಳೊಂದಿಗೆ ಭಾರತ ಮೂರನೇ ಸ್ಥಾನ ಪಡೆದಿದೆ.

**><><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><><**

**><><> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <><><**